**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>**

**C.C. - 22-22** **ಪಿಡಬ್ಲ್ಯೂಃ** **<u>4</u>**

**ಸಿಡಬ್ಲ್ಯೂಃ** **<u>10</u>**

ಸಾಕ್ಷಿದಾರರ ಹೆಸರು ಃ ರವಿ

ತಂದೆ ಹೆಸರು ಃ ನರಶಿಂಹರಾವ್

ವಯಸ್ಸು ಃ 34 ವರ್ಷ

ಉದ್ಯೋಗ ಃ ಖಾಸಗಿ ಕೆಲಸ

ವಾಸಸ್ಥಳ ಃ ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 07.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 28.9.2021 ರಂದು ಮಃ 2.30 ಗಂಟೆಗೆ ನಾನು ರೇಲ್ವೆ ನಿಲ್ದಾಣ ಬ್ರಿಡ್ಜ ಬಳಿ ಇರುವಾಗ ಮ್ಯಾಥೂ ಹಾಗೂ ಆತನ ಮಗ ಜೈಸನ್ ರವರು ಬೈಕಿನಲ್ಲಿ ಪಿಂಟೋ ಸರ್ಕಲ್ ಕಡೆಯಿಂದ ಬ್ರಿಡ್ಜ ಕಡೆಗೆ ಬರುತ್ತಿದ್ದಾಗ ಹಿಂದಿನಿಂದ ಒಂದು ಟಿಪ್ಪರ ಲಾರಿ ವೇಗವಾಗಿ ಬಂದು, ನಿಯಂತ್ರಿಸಲಾಗದೇ, ಬೈಕಿಗೆ ಡಿಕ್ಕಿಪಡಿಸಿತು. ಮ್ಯಾಥೂ ಕಾಲಿಗೆ ಮುರಿದಿರುತ್ತದೆ. ಮಗುವಿನ ಹೊಟ್ಟೆಗೆ ಗಾಯವಾಗಿದೆ. ಟಿಪ್ಪರ ಚಾಲಕ ಅಲ್ಲಿಗೆ ಬಂದು, ತನ್ನ ಹೆಸರು ಮಹಮ್ಮದ ಅಂತಾ ಹೇಳಿದ್ದಾನೆ. ಆರೋಪಿಗಳನ್ನು ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲವೆಂದು ಹೇಳಿದ್ದಾರೆ. ನಾನು ಅಪಘಾತ ದಲ್ಲಿ ಭಾಗಿಯಾದ ವಾಹನ ನೋಡಿದ್ದೇನೆ. ಹಾಗೂ ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಸದರಿ ವಾಹನ ನೋಡಿ ಗುರುತಿಸುತ್ತಾನೆ. ಗಾಯಾಳುಗಳನ್ನು ಆಸ್ಪತ್ರೆಗೆ ರವಾನಿಸಿದ್ದು, ಚಿಕಿತ್ಸೆ ಫಲಕಾರಿಯಾಗದೇ ಆಸ್ಪತ್ರೆಯಲ್ಲಿ ಮ್ಯಾಥೂ ಮರಣ ಹೊಂದಿದ್ದಾನೆ. ಈ ಕುರಿತು ನಾನು ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ವಿ ಬಿ, ವಕೀಲರಿಂದಃ**

ನಾನು ಕೂಲಿ ಕೆಲಸ ಮಾಡುತ್ತೇನೆ. ನಮ್ಮ ಮನೆ ಮಂಟೂರ ರೋಡದಲ್ಲಿ ಬರುತ್ತದೆ. ನಾನು ಬೆಳಿಗ್ಗೆ 9 ಗಂಟೆಗೆ ಹೋಗಿ ಸಂಜೆಃ 5 ಗಂಟೆಗೆ ವಾಪಸ್ ಬರುತ್ತೇನೆ. ದಿನಾಲು ಅದೇ ಕೆಲಸ. ದಿಃ 29.9.2021 ರಂದು ಬೆಃ 9 ಗಂಟೆಗೆ ಹೋಗಿ ಸಂಜೆಃ 5 ಗಂಟೆಗೆ ಬಂದಿದ್ದೇನೆ. ದಿಃ 28.9.2021 ರಂದು ಸಹ ಅದೇ ರೀತಿ ಬೆಳಿಗ್ಗೆಃ 10 ಗಂಟೆಗೆ ಸಂಜೆಃ 5 ಗಂಟೆಗೆ ಬಂದಿದ್ದೇನೆ.

ಮ್ಯಾಥ್ಯೂ ನಮ್ಮ ಬಳಿ ಕೆಲಸಕ್ಕೆ ಬರುತ್ತಿದ್ದನು. ಆತ ನಮಗೆ ಪರಿಚಯ, ಆದರೆ ಗೆಳೆಯನಲ್ಲ. ದಿಃ 30.11.2021 ರಂದು ಪೋಲಿಸರು ಮ್ಯಾಥ್ಯೂ ಮರಣ ಹೊಂದಿದ್ದಾನೆ ಅಂತಾ ಹೇಳಿದಾಗ ಗೊತ್ತಾಯಿತು ಅಂದರೆ ಸರಿ. ಪೋಲಿಸರು ನನ್ನನ್ನು ಠಾಣೆಗೆ ಕರೆದುಕೊಂಡು ಹೋಗಿದ್ದರು. ಅಪಘಾತ ವಾಗಿ ಎರಡು ದಿನಗಳ ನಂತರ ಠಾಣೆಗೆ ಹೋಗಿದ್ದೆನು. ಪೋಲಿಸರು ಹೇಳಿಕೆ ಬರೆದಿದ್ದಕ್ಕೆ ನಾನು ಹೌದು ಅಂತಾ ಹೇಳಿದ್ದೇನೆ ಅಂದರೆ ಸರಿ. ಅಪಘಾತವು ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ಪೋಲಿಸರು ಹೇಳಿದ್ದರಿಂದ ಅಪಘಾತ ಗೊತ್ತಾಯಿತು ಅಂದರೆ ಸರಿಯಲ್ಲ. ಪಿಂಟೋ ಸರ್ಕಲ್ ಬಳಿ ವಾಹನಗಳು ಬಹಳ ಓಡಾಡುತ್ತವೆ ಅಂದರೆ ಸರಿ. ಅಲ್ಲಿ ಬಹಳ ವಾಹನಗಳು ಬರುವುದರಿಂದ ಒಂದರ ನಂತರ ಒಂದು ವಾಹನಗಳು ನಿಧಾನವಾಗಿ ಹೋಗುತ್ತವೆ ಅಂದರೆ ಸರಿ. ಮ್ಯಾಥ್ಯೂ ಮದ್ಯಪಾನ ಮಾಡಿದ ಬಗ್ಗೆ ಗೊತ್ತಿಲ್ಲ. ಮ್ಯಾಥ್ಯೂ ಕುಡಿದು ಸರ್ಕಲ್ ಬಳಿ ಬಿದ್ದು ಗಾಯಪಡಿಸಿಕೊಂಡಿದ್ದಾನೆ ಅಂದರೆ ಸರಿಯಲ್ಲ. ವಾಹನಗಳ ನಂಬರ ನೆನಪಿಲ್ಲ. ನಾನು ಅಪಘಾತ ವನ್ನು ನೋಡಿದಿದ್ದರೂ ಸಹ ಮ್ಯಾಥ್ಯೂ ನನ್ನ ಗೆಳೆಯನಾಗಿದ್ದರಿಂದ ಅವರ ಕುಟುಂಬಕ್ಕೆ ಪರಿಹಾರ ಸಿಗಲಿ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಯಾವುದೇ ಅಪಘಾತ ನೋಡಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

<u>**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**</u>

**C.C. - 22-22** **ಪಿಡಬ್ಲ್ಯೂ: 5**
**ಸಿಡಬ್ಲ್ಯೂ: 12**

ಸಾಕ್ಷಿದಾರರ ಹೆಸರು : ಮಕಬೂಲ ಬಸ್ತಿ

ತಂದೆ ಹೆಸರು : ಜಾಫರ

ವಯಸ್ಸು : 52 ವರ್ಷ

ಉದ್ಯೋಗ : ಟೈಲ್ಸ ಕೆಲಸ

ವಾಸಸ್ಥಳ : ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕ: 07.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ನಾನು ಅಪಘಾತ ವನ್ನು ನೋಡಿಲ್ಲ. ಹಾಗೂ ವಾಹನ ಸಹ ನೋಡಿಲ್ಲ. ಆರೋಪಿಗಳನ್ನು ಗುರುತಿಸಲಾಗುವುದಿಲ್ಲ. ನಾನು ಪೋಲಿಸರಿಗೆ ಹೇಳಿಕೆ ಹಾಗೂ ಮರು ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದರು, ಅವರ ಮನವಿಯನ್ನು ಪರಿಗಣಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲು: ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ದಿ: 28.9.2021 ರಂದು ಮ: 2.30 ಗಂಟೆಗೆ ಗದಗ ರೋಡಿನ ರೇಲ್ವೆ ನಿಲ್ದಾಣದ ಅಂಡರ ಬ್ರಿಜ್ಜ ಬಳಿ ನನ್ನ ಬೀಡಿ ಅಂಗಡಿಯಲ್ಲಿ ನಾನು ಇರುವಾಗ, ಒಂದು ಬೈಕಿನಲ್ಲಿ ಒಬ್ಬ ವ್ಯಕ್ತಿ ಒಂದು ಮಗುವನ್ನು ಕೂಡ್ರಿಸಿಕೊಂಡು ಪಿಂಟೋ ಸರ್ಕಲ್ ಕಡೆಯಿಂದ ಗದಗ ಅಂಡರ ಬ್ರಿಜ್ಜ ಕಡೆಗೆ ಬಂದು, ಸಿ ಬಿ ಟಿ ಕಡೆಗೆ ಹೋಗುತ್ತಿದ್ದಾಗ ಹಿಂದಿನಿಂದ ಬಂದ ಒಂದು ಟಿಪ್ಪರ ಲಾರಿ ನಂ: ಕೆಎ-25 ಎಎ/3504 ನೇದ್ದನ್ನು ಈ ಪ್ರಕರಣದ ಆರೋಪಿತನು ಅತಿ ವೇಗ ಹಾಗೂ ಅಜಾರೂಕತೆಯಿಂದ ಚಲಾಯಿಸಿಕೊಂಡು ಬಂದು, ಬೈಕಿಗೆ ಡಿಕ್ಕಿಪಡಿಸಿ ಬೈಕ ಸವಾರ ಹಾಗೂ ಮಗುವಿಗೆ ಕೆಳಗಡೆಗೆ ಬೀಳಿಸಿ, ಆಗ ನಾವು ಸ್ಥಳಕ್ಕೆ ಹೋಗಿ ನೋಡಲಾಗಿ ಬೈಕ್ ಸವಾರನ ಎಡತೊಡೆ ಬಳಿ ಬೆನ್ನಿಗೆ ಹಾಗೂ ತಲೆಗೆ ತೀವ್ರತೆರನಾದ ರಕ್ತಗಾಯವಾಗಿದ್ದುಚಿ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ ಅಂದರೆ ಸರಿಯಲ್ಲ.

ಮಗುವಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು, ಆಗ ಟಿಪ್ಪರ ಲಾರಿ ಚಾಲಕ ಅಲ್ಲಿ ಸ್ಥಳಕ್ಕೆ ಬಂದಿದ್ದು, ಆತತನ್ನು ವಿಚಾರಿಸಿದಾಗ ಆತ ತನ್ನ ಹೆಸರು ಮಹಮ್ಮದ ಯೂನುಸ್ ತಂದೆಃ ಜಹಾಂಗೀರಸಾಬ ಅನ್ಸಾರಿ ಅಂತಾ ತಿಳಿಸಿದ್ದು, ಸದರಿ ಹೆಸರನ್ನು ಆತ ಸುಳ್ಳು ಹೇಳಿದ್ದು, ನಂತರ ಆತನ ನಿಜವಾದ ಹೆಸರು ಮೆಹಬೂಬಸಾಬ ತಂದೆಃ ಫೈಯಾಜ ಅಕ್ಕಾದ ನಾಗನೂರ ಅಂತಾ ತಿಳಿದುಬಂದಿದತು ಅಂದರೆ ಸರಿಯಲ್ಲ. ಈ ಕುರಿತು ನಾನು ನನಗೆ ಓದಿ ಹೇಳಿದಂತೆ ಹೇಳಿಕೆ ಹಾಗೂ ಮರು ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆ ಹಾಗೂ ಮರು ಹೇಳಿಕೆಯನ್ನು ನಿಪಿ.9 ಹಾಗೂ 10 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ಹೇಳಿದ್ದಾರೆ.**

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

<u>**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**</u>

**C.C. - 22-22** **ಪಿಡಬ್ಲ್ಯೂ ಃ** <u>**6**</u>

**ಸಿಡಬ್ಲ್ಯೂ ಃ** <u>**11**</u>

ಸಾಕ್ಷಿದಾರರ ಹೆಸರು ಃ ಮಹಬೂಬಅಲಿ ಸೈಯದ

ತಂದೆ ಹೆಸರು ಃ ಮೋದಿನಸಾಬ

ವಯಸ್ಸು ಃ 53 ವರ್ಷ

ಉದ್ಯೋಗ ಃ ಆಟೋ ಚಾಲಕ

ವಾಸಸ್ಥಳ ಃ ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 07.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಅಪಘಾತ ವನ್ನು ನೋಡಿಲ್ಲ. ಹಾಗೂ ವಾಹನ ಸಹ ನೋಡಿಲ್ಲ. ಆರೋಪಿಗಳನ್ನು ಗುರುತಿಸಲಾಗುವುದಿಲ್ಲ. ನಾನು ಪೋಲಿಸರಿಗೆ ಹೇಳಿಕೆ ಹಾಗೂ ಮರು ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದರು, ಅವರ ಮನವಿಯನ್ನು ಪರಿಗಣಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 28.9.2021 ರಂದು ಮಃ 2.30 ಗಂಟೆಗೆ ಗದಗ ರೋಡಿನ ರೇಲ್ವೆ ನಿಲ್ದಾಣದ ಅಂಡರ ಬ್ರಿಡ್ಜ ಬಳಿ, ಆಟೋ ಸ್ಟ್ಯಾಂಡ ಬಳಿ ಇರುವಾಗ, ಒಂದು ಬೈಕಿನಲ್ಲಿ ಒಬ್ಬ ವ್ಯಕ್ತಿ ಒಂದು ಮಗುವನ್ನು ಕೂಡ್ರಿಸಿಕೊಂಡು ಪಿಂಟೋ ಸರ್ಕಲ್ ಕಡೆಯಿಂದ ಗದಗ ಅಂಡರ ಬ್ರಿಡ್ಜ ಕಡೆಗೆ ಬಂದು, ಸಿ ಬಿ ಟಿ ಕಡೆಗೆ ಹೋಗುತ್ತಿದ್ದಾಗ ಹಿಂದಿನಿಂದ ಬಂದ ಒಂದು ಟಿಪ್ಪರ ಲಾರಿ ನಂಃ ಕೆಎ-25 ಎಎ/3504 ನೇದ್ದನ್ನು ಈ ಪ್ರಕರಣದ ಆರೋಪಿತನು ಅತಿ ವೇಗ ಹಾಗೂ ಅಜಾರೂಕತೆಯಿಂದ ಚಲಾಯಿಸಿಕೊಂಡು ಬಂದು, ಬೈಕಿಗೆ ಡಿಕ್ಕಿಪಡಿಸಿ ಬೈಕ ಸವಾರ ಹಾಗೂ ಮಗುವಿಗೆ ಕೆಳಗಡೆಗೆ ಬೀಳಿಸಿ, ಆಗ ನಾವು ಸ್ಥಳಕ್ಕೆ ಹೋಗಿ ನೋಡಲಾಗಿ ಬೈಕ್ ಸವಾರನ ಎಡತೊಡೆ ಬಳಿ ಬೆನ್ನಿಗೆ ಹಾಗೂ ತಲೆಗೆ ತೀವ್ರತೆರನಾದ ರಕ್ತಗಾಯವಾಗಿದ್ದುಚಿ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ ಅಂದರೆ ಸರಿಯಲ್ಲ.

ಮಗುವಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು, ಆಗ ಟಿಪ್ಪರ ಲಾರಿ ಚಾಲಕ ಅಲ್ಲಿ ಸ್ಥಳಕ್ಕೆ ಬಂದಿದ್ದು, ಆತತನ್ನು ವಿಚಾರಿಸಿದಾಗ ಆತ ತನ್ನ ಹೆಸರು ಮಹಮ್ಮದ ಯೂನುಸ್ ತಂದೆಃ ಜಹಾಂಗೀರಸಾಬ ಅನ್ಸಾರಿ ಅಂತಾ ತಿಳಿಸಿದ್ದು, ಸದರಿ ಹೆಸರನ್ನು ಆತ ಸುಳ್ಳು ಹೇಳಿದ್ದು, ನಂತರ ಆತನ ನಿಜವಾದ ಹೆಸರು ಮೆಹಬೂಬಸಾಬ ತಂದೆಃ ಫೈಯಾಜ ಅಕ್ಕಾದ ನಾಗನೂರ ಅಂತಾ ತಿಳಿದುಬಂದಿದತು ಅಂದರೆ ಸರಿಯಲ್ಲ. ಈ ಕುರಿತು ನಾನು ನನಗೆ ಓದಿ ಹೇಳಿದಂತೆ ಹೇಳಿಕೆ ಹಾಗೂ ಮರು ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆ ಹಾಗೂ ಮರು ಹೇಳಿಕೆಯನ್ನು ನಿಪಿ.11 ಹಾಗೂ 12 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ಹೇಳಿದ್ದಾರೆ.**

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.